ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ: ಸಿಬ್ಬಂದಿ-3/3ಡಿ/ಸಿಆರ್-02/2015-16

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ,
ಗಾಂಧಿನಗರ, ಬೆಂಗಳೂರು,
ದಿನಾಂಕ: 10-05-2018.

## ಅಧಿಕೃತ ಜ್ಞಾಪನ

ವಿಷಯ: ವಾಣಿಜ್ಯ ತೆರಿಗೆಗಳ ಇಲಾಖೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನೇರ ನೇಮಕಾತಿಯಡಿ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳಿಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1) ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 09 ಆರ್‌ಟಿ(4)ಬಿ/2015, ದಿನಾಂಕ: 11-05-2017.
2) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಆರ್(4) /100/17-18, ದಿನಾಂಕ: 20-05-2017.

** * **

ವಾಣಿಜ್ಯ ತೆರಿಗೆಗಳ ಇಲಾಖೆಯ 307 ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಉಲ್ಲೇಖ (2)ರ ಪತ್ರಕ್ಕೆ ಲಗತ್ತಿಸಿದ ಉಲ್ಲೇಖ (1)ರ ಅಧಿಸೂಚನೆಯನ್ವಯ ಸ್ವೀಕರಿಸಲಾಗಿದೆ. ಇದರನ್ವಯ ವಿವಿಧ ಮೀಸಲಾತಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಪರಿಶೀಲನೆ, ಪೋಲೀಸ್ ತನಿಖಾ ವರದಿ, ಅಂಗವಿಕಲ ವೈದ್ಯಕೀಯ ಪ್ರಮಾಣಪತ್ರ, ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿಯ ಪ್ರಮಾಣ ಪತ್ರ, ಹೈದರಾಬಾದ್-ಕರ್ನಾಟಕ ಪ್ರದೇಶದ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಪರಿಶೀಲನೆಗಾಗಿ ಕಳುಹಿಸಲಾಗಿತ್ತು. ಅದರಲ್ಲಿ ಈ ಕೆಳಕಂಡ ಅಭ್ಯರ್ಥಿಗಳ ಪರಿಶೀಲನಾ ಪ್ರಮಾಣ ಪತ್ರಗಳು/ಪ್ರಮಾಣ ಪತ್ರಗಳ ನೈಜತೆಯ ಧೃಢೀಕರಣ ಪತ್ರಗಳನ್ನು ಸ್ವೀಕರಿಸಲಾಗಿದೆ.

ಮೇಲಿನ ಧೃಢೀಕರಣ ಪತ್ರ ಮತ್ತು ಪರಿಶೀಲನಾ ವರದಿಗಳು ಸ್ವೀಕೃತವಾಗಿರುವ ಈ ಕೆಳಕಂಡ ಅಭ್ಯರ್ಥಿಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗೆ ನೂತನ ವೇತನ ಶ್ರೇಣಿ ರೂ.33450-850-36000-950-39800-1100-46400-1250-53900-1450-62600ರಲ್ಲಿ ಪರೀಕ್ಷಾರ್ಥಿಗಳನ್ನಾಗಿ ನೇಮಕ ಮಾಡಿ ಅವರ ಹೆಸರಿನ ಮುಂದೆ ಅಂಕಣ (6)ರಲ್ಲಿ ಕಾಣಿಸಿರುವ ವಿಭಾಗಗಳಿಗೆ ತರಬೇತಿಗಾಗಿ ಹಂಚಿಕೆ ಮಾಡಲಾಗಿದೆ:-

| ಉಳಿದ ಮೂಲ ವೃಂದ | | | | | |
|---|---|---|---|---|---|
| ಕ್ರ ಸಂ. | ಕೆಪಿಎಸ್‌ಸಿ ಕ್ರ.ಸಂ. | ಹೆಸರು | ಜನ್ಮ ದಿನಾಂಕ | ಮೀಸಲಾತಿ | ನೇಮಕಾತಿ ಮಾಡಲಾದ ವಿಭಾಗ |
| 1 | 2 | 3 | 4 | 5 | 6 |
| 1 | 29 | ಜಯಂತ್ ಕುಮಾರ್ ಹೆಚ್., ನಂ.2, ಗುಂಡಮ್ಮ ಲೇಔಟ್, ಜಿ.ಕೆ.ಎಂ. ಕಾಲೇಜು ರಸ್ತೆ, ಜರಗನಹಳ್ಳಿ, ಬೆಂಗಳೂರು ನಗರ-560078. | 15-05-88 | ಸಾಅ/ ಪ್ರವರ್ಗ-1 | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |
| 2 | 33 | ಯೋಗೇಶ ಎಂ.ಆರ್., ಮಾಲೇಕೊಪ್ಪಲು ಗ್ರಾಮ, ಗುಲಸಿಂದ ಅಂಚೆ, ಕಸಬ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ-573116. | 01-05-86 | ಸಾಅ/2ಎ/ ಗ್ರಾಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಮೈಸೂರು. |
| 3 | 38 | ಪ್ರವೀಣ ಅವರಾದ, ಬಿನ್ ಬಿ.ಎಂ.ಅವರಾದ, ಮೋರಟಗಿ ಅಂಚೆ, ಸಿಂಧಗಿ ತಾಲ್ಲೂಕು, ವಿಜಯಪುರ-586123. | 25-10-91 | ಸಾಅ/ಇತರೆ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |
| 4 | 58 | ನಿಸಾರ್ ಅಹಮದ್ ಅಲ್ಲಾಬಕ್ಷ್ ಮುಜಾವರ್, ಬಿನ್ ಎ.ಬಿ.ಮುಜಾವರ್, ರೈಲ್ವೆ ಸ್ಟೇಷನ್ ಹತ್ತಿರ, ಲಚ್ಯಾನ್, ಇಂಡಿ ತಾಲ್ಲೂಕು, ವಿಜಯಪುರ-586211. | 02-07-90 | ಸಾಅ/2ಬಿ/ ಗ್ರಾಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಬೆಳಗಾವಿ. |
| 5 | 84 | ಹರ್ಷವರ್ಧನ್ ರಾಥೋಡ್ ಜಿ.ಟಿ., ತಂಗ್ಲಿ ತಾಂಡಾ, ವಿ.ಎಲ್.ನಗರ, ಕಡೂರು ತಾಲ್ಲೂಕು, ಚಿಕ್ಕಮಗಳೂರು-577548. | 01-08-89 | ಪಜಾ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಶಿವಮೊಗ್ಗ. |
| 6 | 98 | ಮಾರುತಿ ಹೆಚ್., 44, 4ನೇ ಕ್ರಾಸ್, 1ನೇ ಬ್ಲಾಕ್, 2ನೇ ಹಂತ, ನಾಗರಬಾವಿ, ಬೆಂಗಳೂರು ನಗರ-560072. | 14-02-84 | ಸಾಅ/3ಎ/ ಯೋಅ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |
| 7 | 108 | ಸಂತೋಷ್ ವಗ್ಗಣ್ಣವರ್, ವಾಸ ಮತ್ತು ಅಂಚೆ ಬಳಗಾನೂರು, ಗದಗ ತಾಲ್ಲೂಕು, ಗದಗ-582102. | 01-06-86 | 2ಎ/ಗ್ರಾಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಧಾರವಾಡ. |

| | | | | | |
|---|---|---|---|---|---|
| 8 | 143 | ಅಶೋಕ್ ಕುಮಾರ್,<br>ಹಾದನೂರು ಗ್ರಾಮ & ಅಂಚೆ,<br>ಹೆಚ್.ಡಿ.ಕೋಟೆ ತಾಲ್ಲೂಕು,<br>ಮೈಸೂರು ಜಿಲ್ಲೆ,<br>ಮೈಸೂರು–571121. | 22–05–89 | ಪ.ಜಾ./ಗ್ರಾಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಮೈಸೂರು. |
| 9 | 187 | ಸೌಮ್ಯಶ್ರೀ ಎಸ್.,<br>ಶಿವಣ್ಣ ಹೆಚ್.,<br>ಮುಖ್ಯ ರಸ್ತೆ, ಉಪ್ಪಾರ ಸ್ಟ್ರೀಟ್<br>ದೊಡ್ಡಿಂದುವಾಡಿ, ಕೊಳ್ಳೇಗಾಲ,<br>ಚಾಮರಾಜನಗರ–571440. | 24–03–91 | ಪ್ರವರ್ಗ–1/<br>ಮಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಮೈಸೂರು. |
| 10 | 189 | ರಾಧಿಕಾ ಧೂತ್,<br>ಕೇರಾಫ್ ಗೋಕುಲ್ ಗ್ರಾನೈಟ್,<br>ವಾಸ ಇಳಕಲ್,<br>ಹುನಗುಂದ ತಾಲ್ಲೂಕು,<br>ಬಾಗಲಕೋಟೆ–587125. | 03–10–87 | 3ಬಿ/ಮಅ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |
| 11 | 200 | ಗೀತಾ ಬಿ.,<br>ನಂ.358, 2ನೇ ಮಹಡಿ,<br>ಎಚ್ಚೆಮ ನಾಯಕ ರಸ್ತೆ,<br>1ನೇ ಅಡ್ಡರಸ್ತೆ,<br>ಕಿಡ್ಸ್ ಕಾನ್ವೆಂಟ್ ಎದುರು,<br>ಲಕ್ಷ್ಮಿಪುರ, ಬೆಂಗಳೂರು,<br>ಬೆಂಗಳೂರು ನಗರ–560019. | 22–05–88 | 2ಎ/ಮಅ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |
| 12 | 222 | ಮಂಜುಳ ಹ್ಯಾಟಿ,<br>ಬಿನ್ ಅನಲೆಪ್ಪ ಹ್ಯಾಟಿ<br>ಹಳೇಬಂಡಿ ಹರಳಾಪುರ,<br>ಹೊಸಬಂಡಿ ಹರಳಾಪುರ<br>ಅಂಚೆ, ಕೊಪ್ಪಳ ತಾಲ್ಲೂಕು,<br>ಕೊಪ್ಪಳ–583234. | 10–06–93 | ಪಪಂ/ಮಅ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಧಾರವಾಡ. |
| 13 | 231 | ಬಸವರಾಜ ಬಿರಾದಾರ್,<br>ನಂ.153, ಶ್ರೀ ವಿಶಾಲ ಪ್ರಿಂಟರ್ಸ್,<br>4ನೇ ಮ್ಯೇನ್, 8ನೇ ಕ್ರಾಸ್,<br>ಚಾಮರಾಜಪೇಟೆ,<br>ಬೆಂಗಳೂರು ನಗರ–560018. | 21–12–73 | ಸಾಅ/ಮಾಸೈ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |

| **ಹೈದರಾಬಾದ್ – ಕರ್ನಾಟಕ** | | | | | |
|---|---|---|---|---|---|
| **ರಾಜ್ಯವ್ಯಾಪಿ ಸ್ಥಳೀಯ ವೃಂದ** | | | | | |
| 1 | 38 | ಸೌಮ್ಯ ಹೆಚ್.ಕೆ.,<br>ರಾಂಪುರ ಅಂಚೆ,<br>ಮೊಳಕಾಲ್ಮೂರು ತಾಲ್ಲೂಕು,<br>ಚಿತ್ರದುರ್ಗ ಜಿಲ್ಲೆ,<br>ಚಿತ್ರದುರ್ಗ–577540. | 25–05–92 | ಸಾಅ/3ಬಿ/<br>ಮಅ/ಹೈಕ | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಶಿವಮೊಗ್ಗ. |

| | | | | | |
|---|---|---|---|---|---|
| 2 | 48 | ಲಲಿತಾ ಬಾಯಿ,<br>ಲಲಿತಾ ಬಾಯಿ ತಂಬಕೆ,<br>ಗಣೇಶ ನಿವಾಸ,<br>ಲಕ್ಷ್ಮಿ ದೇವಸ್ಥಾನದ ಬಲಗಡೆ,<br>ಲಕ್ಷ್ಮಿನಗರ,<br>ಯಾದಗಿರಿ-585202. | 04-02-87 | 3ಬಿ/ಮಹಿ<br>ಹೈಕ | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದಕ್ಷಿಣ ವಲಯ, ಬೆಂಗಳೂರು. |

**ಈ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:-**

1) ಈ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ.

2) ಈ ನೇಮಕಾತಿ ಆದೇಶ ಸ್ವೀಕರಿಸಿದ 15 ದಿನಗಳ ಒಳಗಾಗಿ ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರುಗಳು ನಿಯುಕ್ತಿಗೊಳಿಸಲಾದ ವಿಭಾಗಗಳಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ನಿಗದಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮ (ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 18(3) ರನ್ವಯ ನೇಮಕಾತಿಯನ್ನು ರದ್ದುಪಡಿಸಲಾಗುವುದು.

3) ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರುಗಳು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977 ರನ್ವಯ ಅವರು ಕರ್ತವ್ಯಕ್ಕೆ ಹಾಜರಾದ ಎರಡು ವರ್ಷಗಳ ಕಾಲಾವಧಿಯಲ್ಲಿಯೇ ಪರೀಕ್ಷಾರ್ಥ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸುವುದು ಕಡ್ಡಾಯವಾಗಿರುತ್ತದೆ. ಪರೀಕ್ಷಾರ್ಥ ಸೇವಾವಧಿಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಾವಳಿಗಳು 1974 ರಡಿ ನಿರ್ದಿಷ್ಟ ಪಡಿಸಿರುವ ಈ ಕೆಳಕಂಡ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು.

   1) ಕನ್ನಡ ಭಾಷಾ ಪರೀಕ್ಷೆ
   2) ಅಕೌಂಟ್ಸ್ ಹೈಯರ್
   3) ವಾಣಿಜ್ಯ ತೆರಿಗೆ ಭಾಗ-1
   4) ಜನರಲ್ ಲಾ ಭಾಗ-1

4) ಸರ್ಕಾರದ ಆದೇಶದ ಸಂಖ್ಯೆ. ಆಇ (SPL) 04 PET 2005, ದಿನಾಂಕ: 31-03-2006ರ ಮೇರೆಗೆ ಈ ನೇಮಕಾತಿಯು ಪಿಂಚಣಿ ರಹಿತವಾಗಿದ್ದು, ಹೊಸದಾಗಿ ಅನುಷ್ಠಾನಗೊಳಿಸಲಾಗಿರುವ ಅಂಶದಾಯಿ ಪಿಂಚಣಿ ಯೋಜನೆಗೆ (Contributory Pension Scheme) ಒಳಪಟ್ಟಿರುತ್ತದೆ.

5) ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದ ರೀತ್ಯಾ ಕೆಳಕಂಡಂತೆ "ನಿಷ್ಠೆಯ ಪ್ರಮಾಣಪತ್ರ" ಸಲ್ಲಿಸತಕ್ಕದ್ದು:-

ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸುವ ಭಾರತ ಸಂವಿಧಾನದ ರೀತ್ಯಾ "ನಿಷ್ಠೆಯ ಪ್ರಮಾಣಪತ್ರ".

(ಅ) ನಾನು __________________ ಸರ್ಕಾರಿ ಸೇವೆಯಲ್ಲಿ ಪ್ರಾಮಾಣಿಕತೆಯಿಂದಲೂ ಭಾರತ ಸಂವಿಧಾನಕ್ಕೆ ಬದ್ಧನಾಗಿ/ಬದ್ಧಳಾಗಿ ನಿಷ್ಠೆಯಿಂದಲೂ ಕಾರ್ಯನಿರ್ವಹಿಸುತ್ತೇನೆ.

(ಆ) ನನಗೆ ಮದುವೆಯಾಗಿದೆ/ಮದುವೆಯಾಗಿರುವುದಿಲ್ಲ. ಒಬ್ಬರಿಗಿಂತ ಹೆಚ್ಚಿನ ಜೀವಂತ ಪತ್ನಿ/ಪತಿ ಇರುವುದಿಲ್ಲ. ನನ್ನ ಜೀವಂತ ಪತ್ನಿ/ಪತಿಯ ಹೆಸರು __________________.

(ಇ) ನನ್ನ ಜನ್ಮ ದಿನಾಂಕವನ್ನು ಮತ್ತು ಹೆಸರನ್ನು ಶಾಲಾ ವರ್ಗಾವಣೆ ಪ್ರಮಾಣಪತ್ರ/ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ಪ್ರಕಾರ ನಿರ್ಧರಿಸಬಹುದಾಗಿದೆ.

ಸ್ಥಳ : (ನೌಕರರ ಹೆಸರು ಮತ್ತು ಪದನಾಮ)

ದಿನಾಂಕ:

6) ಎಲ್ಲಾ ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರುಗಳ ಜನ್ಮ ದಿನಾಂಕವನ್ನು ಅವರ ಮೂಲ ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ಇತರೆ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಿ ಕರ್ನಾಟಕ ರಾಜ್ಯ ನೌಕರರ (ವಯೋಮಾನ ನಿರ್ಧರಿಸುವಿಕೆ) ಅಧಿನಿಯಮ 1974ರ ಕಲಂ 3 ರಡಿಯಲ್ಲಿ ಕೈಗೊಳ್ಳಬೇಕಾದ ಕ್ರಮವನ್ನು ಸಂಬಂಧಿಸಿದ ವಿಭಾಗೀಯ ಮುಖ್ಯಸ್ಥರು ತಪ್ಪದೇ ಜರುಗಿಸುವುದು.

7) ಈ ಅಭ್ಯರ್ಥಿಗಳು ಪರೀಕ್ಷಾರ್ಥ ಸೇವಾವಧಿಯಲ್ಲಿ ಇಲಾಖೆಯ ವಿವಿಧ ವಿಭಾಗಗಳಲ್ಲಿ ತರಬೇತಿಯನ್ನು ಪೂರೈಸಬೇಕಾಗಿದೆ. ಈ ಅವಧಿಯಲ್ಲಿ ಈ ಅಭ್ಯರ್ಥಿಗಳ ವೇತನ ಮತ್ತು ಇತರೆ ಭತ್ಯೆಗಳನ್ನು ವಿತರಣೆ ಮಾಡಲು ಹಂಚಿಕೆ ಮಾಡಲಾದ ಆಯಾ ವಿಭಾಗೀಯ ಮುಖ್ಯಸ್ಥರೇ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಾಗಿರುತ್ತಾರೆ.

8) ಈ ಅಭ್ಯರ್ಥಿಗಳು ಅಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ 37 ಎಸ್.ಆರ್.ಪಿ. 74 ದಿನಾಂಕ: 05-08-1974ರ ಪ್ರಕಾರ ಪ್ರಮಾಣ ಪತ್ರವನ್ನು ಸಲ್ಲಿಸುವುದು.

9) ಮೀಸಲಾತಿ ನಿಯಮಾವಳಿಗಳನ್ವಯ ಮೀಸಲಾತಿ ಕೋರಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ವಿವಿಧ ಇಲಾಖೆಗಳು ಕಳುಹಿಸುವ ಪರಿಶೀಲನಾ ವರದಿಯಲ್ಲಿ ಯಾವುದಾದರೂ ಲೋಪ ಕಂಡು ಬಂದಲ್ಲಿ ಅವರು ಮೀಸಲಾತಿ ಕೋಟಾದಡಿ ಆಯ್ಕೆಯಾಗಿ ಪಡೆದಿದ್ದ ಆದೇಶವು ರದ್ದಾಗುತ್ತದೆ.

10) ನೇಮಕಾತಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಬಚ್ಚಿಟ್ಟಲ್ಲಿ/ಅಸಮರ್ಪಕ/ಸುಳ್ಳು ಮಾಹಿತಿಯನ್ನು ನೀಡಿ ನೇಮಕಗೊಂಡಿರುವುದು ನೇಮಕಾತಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ಅಂತಹ ನೇಮಕಾತಿ ರದ್ದಾಗುತ್ತದೆ.

11) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ಅಂತಹ ಅಭ್ಯರ್ಥಿಗಳು ಇಲಾಖೆಯಿಂದ ಬಿಡುಗಡೆಗೊಂಡಿರುವ ಬಗ್ಗೆ ದೃಢೀಕರಣ ಪತ್ರವನ್ನು ಹಾಜರುಪಡಿಸತಕ್ಕದ್ದು.

12) ಸರ್ಕಾರಿ ಸೇವೆಯಲ್ಲಿದ್ದು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

13) ಅಭ್ಯರ್ಥಿಗಳ ಜೇಷ್ಠತೆಯನ್ನು ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಆಯ್ಕೆ ಪಟ್ಟಿಯ ಕ್ರಮಾಂಕದ ಆಧಾರದ ಮೇಲೆ ಪರಿಗಣಿಸಲಾಗುವುದು.

14) ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಅಂಕ ಪಟ್ಟಿ ಹಾಗೂ ಇತರೆ ದಾಖಲೆಗಳ ಧೃಡಿಕೃತ ಪ್ರತಿಗಳನ್ನು (2 ಸೆಟ್) ಸಂಬಂಧಿಸಿದ ವಿಭಾಗೀಯ ಮುಖ್ಯಸ್ಥರುಗಳಿಗೆ ಸಲ್ಲಿಸತಕ್ಕದ್ದು.

15) ಕರ್ನಾಟಕ ಲೋಕಸೇವಾ ಆಯೋಗದಿಂದ ವಾಣಿಜ್ಯ ತೆರಿಗೆಗಳ ಇಲಾಖೆಗೆ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಅಧಿಸೂಚನೆ ಸಂಖ್ಯೆ.ಪಿಎಸ್‌ಸಿ 9 ಆರ್‌ಟಿ (4) ಬಿ/2015 ದಿನಾಂಕ: 11-05-2017ರಲ್ಲಿನ 307 ಅಭ್ಯರ್ಥಿಗಳ ಪೈಕಿ 26 ಅಭ್ಯರ್ಥಿಗಳು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಿರುವುದಿಲ್ಲ. ಈ ಅಭ್ಯರ್ಥಿಗಳನ್ನು ಹೊರತುಪಡಿಸಿ, ಉಳಿದ 281 ಅಭ್ಯರ್ಥಿಗಳಲ್ಲಿ 185 ಅಭ್ಯರ್ಥಿಗಳಿಗೆ ಈಗಾಗಲೇ ದಿ: 21-12-2017ರಂದು ಮತ್ತು 50 ಅಭ್ಯರ್ಥಿಗಳಿಗೆ ದಿ: 29-01-2018ರ ಅಧಿಕೃತ ಜ್ಞಾಪನಗಳಲ್ಲಿ ಒಟ್ಟು 235 ಅಭ್ಯರ್ಥಿಗಳನ್ನು ಪರೀಕ್ಷಾರ್ಥಿಗಳನ್ನಾಗಿ ನೇಮಕಾತಿ ಮಾಡಿ ತರಬೇತಿಗಾಗಿ ನಿಯೋಜಿಸಲಾಗಿದೆ. ಇನ್ನುಳಿದ 46 ಅಭ್ಯರ್ಥಿಗಳ ಪೈಕಿ ಈ ಕೆಳಕಂಡ ಕೋಷ್ಠಕಗಳ ಅಂಕಣ (3)ರಲ್ಲಿ ಕಾಣಿಸಿರುವ 31 ಅಭ್ಯರ್ಥಿಗಳಿಗೆ ಮುಂದಿನ ನೇಮಕಾತಿ ಆದೇಶ ನೀಡುವ ಸಂಬಂಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು:-

ಉಳಿದ ಮೂಲ ವೃಂದ – 27

| ಕ್ರ.ಸಂ. | ಕೆ.ಪಿ.ಎಸ್.ಸಿ. ಕ್ರ.ಸಂ. | ಹೆಸರು |
|---|---|---|
| 1 | 2 | 3 |
| 1 | 1 | ಮನೀಷ್ ನಾಯಕ್ |
| 2 | 10 | ಸುನಿಲ್ ಕುಮಾರ್ ಟಿ.ಕೆ. |
| 3 | 26 | ಪ್ರದೀಪ್ ನಾಯಕ್ |
| 4 | 27 | ಓಂಶೇಖರ್ |
| 5 | 42 | ದಿನೇಶ್ ಕೆ. |
| 6 | 60 | ಶಾಂತಲಕ್ಷ್ಮಿ ಕೆ. |
| 7 | 63 | ಬಸವರಾಜ್ |
| 8 | 83 | ರಜನಿ |
| 9 | 86 | ಪ್ರಮೋದ್‌ಕುಮಾರ್ ಜೆ. |
| 10 | 92 | ಹಡಗಲಿ ಅರುಣ್‌ಕುಮಾರ್ |
| 11 | 93 | ರಾಘವೇಂದ್ರ ಮಂಜುನಾಥ್ ನಾಯಕ್ |
| 12 | 96 | ವಿಶ್ವನಾಥ ಜೆ.ಕೆ. |
| 13 | 105 | ಮಂಜುನಾಥ ಸಿದ್ದಪ್ಪ ಕುರಿ |
| 14 | 106 | ಹರೀಶ್ ಎನ್.ವಿ. |
| 15 | 114 | ದಿವ್ಯಶ್ರೀ ಕೆ.ಆರ್. |
| 16 | 120 | ಯಲ್ಲರೆಡ್ಡಪ್ಪ |
| 17 | 125 | ಪ್ರದೀಪ್ ಕುಮಾರ್ ಸಿ. |
| 18 | 146 | ಪ್ರಕಾಶ್‌ನಾಯಕ್ ಎನ್. |
| 19 | 164 | ರಾಜು ಕೆ. |
| 20 | 167 | ರಾಜೇಶ್ವರಿ ಎಸ್. |
| 21 | 177 | ರಾಧಾ ಪಿ. |
| 22 | 198 | ಶಿವಲಿಂಗ ಪಾಟೀಲ್ |
| 23 | 209 | ಕಮಲಾ ಬಾಯಿ ಬಿ. |
| 24 | 213 | ಮಮತ ಎಂ. |
| 25 | 233 | ಹರೀಶ್ ಎಸ್.ಎಲ್. |
| 26 | 238 | ಕುಮಾರ ರಂಗನ್ ಡಿ. |
| 27 | 248 | ಗೋಪಿ ಬಿ.ಆರ್. |

ರಾಜ್ಯ ವ್ಯಾಪಿ ಸ್ಥಳೀಯ ವೃಂದ (ಹೈ–ಕ.) – 04

| ಕ್ರ.ಸಂ. | ಕೆ.ಪಿ.ಎಸ್.ಸಿ. ಕ್ರ.ಸಂ. | ಹೆಸರು |
|---|---|---|
| 1 | 2 | 3 |
| 1 | 16 | ಉಡಗಿ ವಿಠಲ್ ಶಿವರಾಯ |
| 2 | 39 | ಶೃತಿ ಐ. |
| 3 | 50 | ಯಶೋದರ ಸುರೆ |
| 4 | 52 | ಮಧುಮತಿ |

16) ಮೀಸಲಾತಿಯನ್ನು ಕೋರಿ ಸಾಮಾನ್ಯ ಅರ್ಹತೆಯಡಿ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ 01-04-2016ಕ್ಕೆ 35 ವಯೋಮಿತಿ ಮೀರಿರುವ ಅಭ್ಯರ್ಥಿಗಳೂ ಸೇರಿದಂತೆ ವಿವಿಧ ಮೀಸಲಾತಿಯಡಿ ಆಯ್ಕೆಹೊಂದಿರುವ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ

ಸಂ.ಎಸ್.ಡಬ್ಲ್ಯು.ಎಲ್.247.ಎಸ್.ಎ.ಡಿ.90, ದಿನಾಂಕ:22-02-1993ರ ಅನ್ವಯ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಸಿಂಧುತ್ವ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

17) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

18) ಸದರಿ ಅಭ್ಯರ್ಥಿಗಳ ನೇಮಕಾತಿಯು ಮತ್ತು ಸೇವಾ ಸೌಲಭ್ಯಗಳು ಆಗಿಂದಾಗ್ಗೆ ಜಾರಿಯಲ್ಲಿರುವ ಸರ್ಕಾರದ ನಿಯಮಗಳು / ಆದೇಶಗಳಿಗೆ ಒಳಪಟ್ಟಿರುತ್ತವೆ.

19) ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಹಾಗೂ ಇಲಾಖಾ ವಿಚಾರಣೆ / ಕ್ರಿಮಿನಲ್ ಮೊಕದ್ದಮೆ ಬಾಕಿ ಇಲ್ಲದಿರುವ / ಹೂಡಲು ಉದ್ದೇಶಿಸದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

20) ಈ ಅಭ್ಯರ್ಥಿಗಳು ಸಲ್ಲಿಸಿರುವ ವಿದ್ಯಾರ್ಹತೆ / ಜನ್ಮ ದಿನಾಂಕಗಳ ಮೂಲ ಪ್ರಮಾಣ ಪತ್ರಗಳು ಸರಿ ಇವೆ ಎಂಬ ಬಗ್ಗೆ ಶಪಥ ಪತ್ರ (ಅಫಿಡವಿಟ್)ವನ್ನು ನಿಗದಿತ ನಮೂನೆಯಲ್ಲಿ ಕರ್ತವ್ಯಕ್ಕೆ ಹಾಜರಾಗುವಾಗ ಸಲ್ಲಿಸತಕ್ಕದ್ದು.

21) ಆಯ್ಕೆ ಪಟ್ಟಿಯಲ್ಲಿರುವ ಮೇಲ್ಕಂಡ ಅಭ್ಯರ್ಥಿಗಳ ನೇಮಕಾತಿಯು ಮುಂದೆ ನ್ಯಾಯಾಲಯಗಳು ನೀಡ ಬಹುದಾದ ಆದೇಶ / ತೀರ್ಪಿಗೆ ಒಳಪಡುತ್ತದೆ.

22) ಪರೀಕ್ಷಾರ್ಥ ಪೂರ್ವ ಸೇವಾವಧಿಯಲ್ಲಿ ಈ ಅಭ್ಯರ್ಥಿಗಳ ಕಾರ್ಯಸ್ಥಾನವು ಹಂಚಿಕೆ ಮಾಡಲಾದ ವಿಭಾಗೀಯ ಮುಖ್ಯಸ್ಥರ ಕೇಂದ್ರ ಸ್ಥಾನವೇ ಆಗಿರುತ್ತದೆ. ವಿಭಾಗೀಯ ಮುಖ್ಯಸ್ಥರು ಪರೀಕ್ಷಾರ್ಥ ಪರಿವೀಕ್ಷಕರನ್ನು ತಮ್ಮ ವಿಭಾಗದ ವ್ಯಾಪ್ತಿಯಲ್ಲಿ ಬೇರೆ ಬೇರೆ ಕಛೇರಿಗಳಲ್ಲಿ ತರಬೇತಿಗೆ ನಿಯೋಜಿಸಿದಾಗ ಅಂತಹ ಸಂದರ್ಭದಲ್ಲಿ ಸ್ಥಳ ಬದಲಾವಣೆಯಾದಾಗ್ಯೂ ಅಂತಹ ಪರೀಕ್ಷಾರ್ಥ ಪರಿವೀಕ್ಷಕರುಗಳಿಗೆ ದಿನ ಭತ್ಯೆಯ ಅರ್ಹತೆ ಇರುವುದಿಲ್ಲ.

23) ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರುಗಳು ಆರು ತಿಂಗಳು ತರಬೇತಿಯ ಮೇಲಿರುತ್ತಾರೆ.

24) ಈ ಆದೇಶದ ಅನ್ವಯ ವಿವಿಧ ವಿಭಾಗಗಳಿಗೆ ಹಂಚಿಕೆ ಮಾಡಲಾಗಿರುವ ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ತರಬೇತಿ ನೀಡಲು ವಿಭಾಗೀಯ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು

ಪ್ರತಿ:

1) ಸಂಬಂಧಿಸಿದ ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರುಗಳಿಗೆ ನೋಂದಾಯಿತ ಅಂಚೆ ಮೂಲಕ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
3) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
4) ಕೇಂದ್ರ ಕಛೇರಿಯ ಎಲ್ಲಾ ಅಪರ ಆಯುಕ್ತರುಗಳು ಹಾಗೂ ಅಪರ ಆಯುಕ್ತರು(ವಲಯ)-1, 2 ಮತ್ತು 3, ಇವರಿಗೆ ಮಾಹಿತಿಗಾಗಿ.
5) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಜಾರಿ), ದ.ವ., ಕೋರಮಂಗಲ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
6) ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರುಗಳು (ಆಡಳಿತ/ಮನವಿಗಳು/ಜಾರಿ/ಜಾಗೃತಿ/ಕಿರಿಯ ಕಾಯ್ದೆಗಳು) ಇವರಿಗೆ ಮಾಹಿತಿಗಾಗಿ.
7) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮಾನವ ಸಂಪನ್ಮೂಲ ಅಭಿವೃದ್ಧಿ), ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, ಬೆಂಗಳೂರು, ಇವರ ಮಾಹಿತಿಗಾಗಿ.
8) ವಾಣಿಜ್ಯ ತೆರಿಗೆ ಉಪ ಆಯುಕ್ತರು(ಸಿಬ್ಬಂದಿ)-2 ಮತ್ತು 3, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
9) ಕಛೇರಿ ಪ್ರತಿ.

# ಅನುಬಂಧ

## ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರ ತರಬೇತಿ ಕಾರ್ಯಕ್ರಮದ ವಿವರಗಳು

| ಬೆಂಗಳೂರಿನ ವಿಭಾಗಗಳು | | |
|---|---|---|
| ಕ್ರ.ಸಂ. | ತರಬೇತಿ ಅವಧಿ | ತರಬೇತಿ ಪಡೆಯುವ ಕಛೇರಿ / ವಿಭಾಗ |
| 1 | ನಾಲ್ಕು ವಾರಗಳು | ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಜಂಟಿ ಆಯುಕ್ತರ ಕಛೇರಿ |
| | ಒಂದು ವಾರ | ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಕುರಿತ ತರಬೇತಿ (ಅನುಬಂಧಕ್ಕೆ ಲಗತ್ತಿಸಿರುವ ಕಾರ್ಯಕ್ರಮದಂತೆ) |
| 2 | ಐದು ವಾರಗಳು | ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳು |
| 3 | ಒಂದು ವಾರ | ವೃತ್ತಿ ತೆರಿಗೆ ಕಾಯ್ದೆ ತರಬೇತಿ – ಕಿರಿಯ ಕಾಯ್ದೆಗಳ ವಿಭಾಗ |
| 4 | ಆರು ವಾರಗಳು | ಲೆಕ್ಕಪರಿಶೋಧನಾ ಕಛೇರಿಗಳು |
| 5 | ಎರಡು ವಾರಗಳು | ಆಂತರಿಕ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಕಛೇರಿ |
| 6 | ನಾಲ್ಕು ವಾರಗಳು | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಜಾರಿ), ದಕ್ಷಿಣ ವಲಯ, ಬೆಂಗಳೂರು, ಇವರ ಕಛೇರಿ |
| 7 | ಎರಡು ವಾರಗಳು | ಮನವಿಗಳು ವಿಭಾಗ |

| ಬೆಂಗಳೂರಿನ ವಿಭಾಗಗಳನ್ನು ಹೊರತುಪಡಿಸಿ | | |
|---|---|---|
| ಕ್ರ.ಸಂ. | ತರಬೇತಿ ಅವಧಿ | ತರಬೇತಿ ಪಡೆಯುವ ಕಛೇರಿ / ವಿಭಾಗ |
| 1 | ನಾಲ್ಕು ವಾರಗಳು | ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಜಂಟಿ ಆಯುಕ್ತರ ಕಛೇರಿ |
| | ಒಂದು ವಾರ | ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಕುರಿತ ತರಬೇತಿ (ಅನುಬಂಧಕ್ಕೆ ಲಗತ್ತಿಸಿರುವ ಕಾರ್ಯಕ್ರಮದಂತೆ) |
| 2 | ಐದು ವಾರಗಳು | ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳು |
| 3 | ಒಂದು ವಾರ | ವೃತ್ತಿ ತೆರಿಗೆ ಕಛೇರಿಗಳು / ಸ್ಥಳಿಯ ಸರಕು ಮತ್ತು ಸೇವಾ ತೆರಿಗೆ ಕಛೇರಿ |
| 4 | ಆರು ವಾರಗಳು | ಲೆಕ್ಕಪರಿಶೋಧನಾ ಕಛೇರಿಗಳು |
| 5 | ಎರಡು ವಾರಗಳು | ಆಂತರಿಕ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಕಛೇರಿ |
| 6 | ನಾಲ್ಕು ವಾರಗಳು | ಜಾರಿ ವಿಭಾಗ |
| 7 | ಎರಡು ವಾರಗಳು | ಮನವಿಗಳು ವಿಭಾಗ |

**ತರಬೇತಿಗೆ ಸಂಬಂಧಿಸಿದಂತೆ ಸೂಚನೆಗಳು:**

1. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಜಾರಿ), ದಕ್ಷಿಣ ವಲಯ, ಬೆಂಗಳೂರು, ಇವರ ವಿಭಾಗಕ್ಕೆ ಹಂಚಿಕೆ ಮಾಡಲಾಗಿರುವ ಏಳು ಅಭ್ಯರ್ಥಿಗಳಿಗೆ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಬೆಂಗಳೂರು, ಇವರು ತಮ್ಮ ವಿಭಾಗಗಳಲ್ಲಿ ಆಡಳಿತ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತರಬೇತಿ ನೀಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

2. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಮೈಸೂರು, ಇವರು ಮೈಸೂರಿನ ಜಾರಿ ವಿಭಾಗಕ್ಕೆ ಹಂಚಿಕೆ ಮಾಡಲಾಗಿರುವ ಮೂರು ಅಭ್ಯರ್ಥಿಗಳಿಗೆ ತಮ್ಮ ವಿಭಾಗಕ್ಕೆ ಈಗಾಗಲೇ ಹಂಚಿಕೆ ಮಾಡಲಾದ ಅಭ್ಯರ್ಥಿಗಳೊಂದಿಗೆ ಆಡಳಿತ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತರಬೇತಿ ನೀಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

3. ದಕ್ಷಿಣ ವಲಯ, ಜಾರಿ ವಿಭಾಗಕ್ಕೆ ಹಂಚಿಕೆ ಮಾಡಲಾಗಿರುವ ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ವೃತ್ತಿ ತೆರಿಗೆ ಕಾಯ್ದೆಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಕಿರಿಯ ಕಾಯ್ದೆಗಳು), ಬೆಂಗಳೂರು, ಇವರೊಡನೆ ಸಮಾಲೋಚಿಸಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

4. ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ನೀಡಬೇಕಾದ ತರಬೇತಿಗೆ ಸಂಬಂಧಿಸಿದಂತೆ ವಿಭಾಗೀಯ ಮುಖ್ಯಸ್ಥರು ಸಂಬಂಧಿಸಿದ ಜಿಲ್ಲಾ ತರಬೇತಿ ಸಂಸ್ಥೆಗಳೊಡನೆ ಸಮಾಲೋಚಿಸಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವಂತೆ ಸೂಚಿಸಲಾಗಿದೆ.

5. ವಿವಿಧ ವಿಭಾಗಗಳಿಗೆ ಹಂಚಿಕೆ ಮಾಡಲಾಗಿರುವ ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಈ ಆದೇಶಕ್ಕೆ ಲಗತ್ತಿಸಿರುವ ತರಬೇತಿ ಕಾರ್ಯಕ್ರಮದಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಬಗ್ಗೆ ಪ್ರತ್ಯೇಕವಾಗಿ ಐದು ದಿನಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ. ಈ ತರಬೇತಿಗಾಗಿ ಆಯಾ ವಿಭಾಗಗಳಲ್ಲಿ ಲಭ್ಯವಿರುವ ಸರಕು ಮತ್ತು ಸೇವಾ ತೆರಿಗೆಯಲ್ಲಿ ತರಬೇತಿ ಪಡೆದ / ನುರಿತ ಅಧಿಕಾರಿಗಳ ಸೇವೆಯನ್ನು ಬಳಸಿಕೊಳ್ಳುವುದು.

6. ಪರೀಕ್ಷಾರ್ಥ ಅಭ್ಯರ್ಥಿಗಳು ತರಬೇತಿ ಸಲುವಾಗಿ ಕೇಂದ್ರಸ್ಥಾನದಿಂದ ಹೊರಗಿನ ಕಛೇರಿಗಳಿಗೆ ತೆರಳಿದ ಸಂದರ್ಭದಲ್ಲಿ, ಅವರು ಯಾವುದೇ ಪ್ರಯಾಣ ಮತ್ತು ದಿನಭತ್ಯೆಗೆ ಅರ್ಹರಿರುವುದಿಲ್ಲ.

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

## ಪರೀಕ್ಷಾರ್ಥ ವಾಣಿಜ್ಯ ತೆರಿಗೆ ಪರಿವೀಕ್ಷಕರಿಗೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ತರಬೇತಿ ಕಾರ್ಯಕ್ರಮ

| DAY | TIME | TOPIC |
|---|---|---|
| 1 | 0900-0930 | Inauguration |
| | 0930-1045 | Overview of GST<br>Model GST Law (CGST & SGST) |
| | 1045-1100 | Tea / Coffee Break |
| | 1100-1215 | Model GST Law (CGST & SGST) |
| | 1215-1220 | Short Break |
| | 1220-1335 | Evolution and History of GST |
| | 1335-1430 | Lunch |
| | 1430-1515 | Levy of and exemption from Tax |
| | 1515-1545 | Registration: Law and Business process;<br>transitional provisions |
| | 1545-1600 | Tea / Coffee break |
| | 1600-1715 | Payment of Tax |
| 2 | 0930-1045 | Filing of returns, matching of input tax credit |
| | 1045-1100 | Tea / Coffee break |
| | 1100-1215 | Topic continues |
| | 1215-1220 | Short Break |
| | 1220-1335 | Meaning and scope of supply of goods and service |
| | 1335-1430 | Lunch |
| | 1430-1545 | Meaning and scope of supply of goods and service |
| | 1545-1600 | Tea / Coffee break |
| | 1600-1715 | Time and valuation of supply of goods and service |
| 3 | 0930-1045 | Input Tax Credit, ISD; Cross-utilization of IGST and funds transfer, transitional provisions |
| | 1045-1100 | Tea / Coffee break |
| | 1100-1215 | Topic continues |
| | 1215-1220 | Short Break |
| | 1220-1335 | Topic continues |
| | 1335-1430 | Lunch |
| | 1430-1545 | Electronic commerce and job work;<br>transitional provisions for job work |
| | 1545-1600 | Tea / Coffee break |
| | 1600-1715 | Demand and Recovery |
| 4 | 0930-1045 | Assessment, Provisional Assessment and Audit |
| | 1030-1045 | Tea / Coffee break |
| | 1045-1200 | Inspection, search, seizure and arrest |
| | 1200-1205 | Short Break |
| | 1205-1305 | Offences and penalty, Prosecution and compounding |

| | | |
|---|---|---|
| | 1305-1400 | Lunch |
| | 1400-1545 | Overview of IGST Act |
| | 1545-1600 | Tea / Coffee break |
| | 1600-1715 | Place of supply of goods and services |
| 5 | 0930-1045 | Transitional provisions |
| | 1045-1100 | Tea / Coffee break |
| | 1100-1215 | Appeals and revision |
| | 1215-1220 | Short Break |
| | 1220-1335 | Refunds |
| | 1335-1430 | Lunch |
| | 1430-1545 | Front-end business processes on GSTN |
| | 1545-1600 | Tea / Coffee break |
| | 1600-1715 | End of the session quiz/ Q & A |

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು